<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 640/2016 ಸಿಡಬ್ಲೂ : 9 ಪಿಡಬ್ಲೂಃ 8

ಪ್ರಮಾಣವಚನ ಬೋಧಿಸಲಾಯಿತು ದಿಃ 18-05-2026

ಹೆಸರು : ಶ್ರೀಮಂತ

ತಂದೆ ಹೆಸರು : ರೇವಣ ಸಿದ್ದಪ್ಪ

ವಯಸ್ಸು : 68 ವರ್ಷ

ಉದ್ಯೋಗ : ನಿವೃತ್ತ ಎ ಎಸ್ ಐ

ವಾಸಸ್ಥಳ : ಕಲಬುರಗಿ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 2015 ರಿಂದ 2016 ವರೆಗೂ ಸೇಡಂ ಪಿ ಎಸ್ ನಲ್ಲಿ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಅವಧಿಯಲ್ಲಿ ನಾನು ದಿಃ 09-03-2016 ರಂದು ನಾನು ಠಾಣೆಯಲ್ಲಿದ್ದಾಗ ಸುಮಾರು ಬೆಳಿಗ್ಗೆ 07-30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಸರ್ಕಾರಿ ಆಸ್ಪತ್ರೆಯಿಂದ ಎಂ ಎಲ್ ಸಿ ಬಂದ ಮೇರೆಗೆ ಕೂಡಲೇ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಚಾಸಾಃ 1 ರವರು ಹೇಳಿಕೆಯನ್ನು ದಾಖಲಿಸಿರುತ್ತೇನೆ. ಸದರಿ ದೂರಿನ ಆಧಾರದ ಮೇಲೆ ನಮ್ಮ ಠಾಣೆಯ ಗುನ್ನೆ ನಂಬರ 53/2016 ನ್ನು ದಾಖಲಿಸಿಕೊಂಡು ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆನು. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ- 1 ಎಂದು ಗುರುತಿಸಲಾಗಿದೆ. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1 (ಬಿ ಮತ್ತು ಸಿ) ಎಂದು ಗುರುತಿಸಲಾಯಿತು. ಪ್ರ.ವ. ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ- 4(ಎ) ಎಂದು ಗುರುತಿಲಾಯಿತು.

ನಂತರ ಅದೇ ದಿನ ಸಾಯಂಕಾಲ 04-00 ರಿಂದ 05-00 ಗಂಟೆಯ ವರೆಗೂ ಚಾಸಾ 5 ರವರು ತೋರಿಸಿದ ಸ್ಥಳದಲ್ಲಿ ಚಾ ಸಾ 2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಅದೇ ರೀತಿ ಪಂಚನಾಮೆಯ ಕಾಲಕ್ಕೆ ಒಂದು ಬಡಿಗೆ ಮತ್ತು ಒಂದು ಕಲ್ಲನ್ನು ವಶಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ಈಗಾಲೇ ನಿ ಪಿ 2 ಎಂದು ಗುರುತಿಸಲಾಗಿದೆ. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ ಪಿ 2(ಎ) ಎಂದು

ಗುರುತಿಸಲಾಯಿತು. ಅದೇ ರೀತಿ ಒಂದು ಬಡಿಗೆ ಮತ್ತು ಕಲ್ಲುನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ 1 ಮತ್ತು 2 ಎಂದು ಗುರುತಿಸಲಾಗಿದೆ. ನಂತರ ಅದೇ ದಿನ ಚಾ ಸಾ 4 ರಿಂದ 7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾರಿ ಚಾ ಸಾ 10 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎನ್ ಎಂ ವಕೀಲರಿಂದ ಃ

ಚಾ ಸಾ 1 ರವರ ಸುಳ್ಳು ಹೇಳಿಕೆಯನ್ನು ಪಡೆದುಕೊಂಡು ಸುಳ್ಳು ಪ್ರ ವ ವರದಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಿಲ್ಲ. ನಾನು ಯಾವುದೇ ರೀತಿಯ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಿಲ್ಲ ಎಂದರೆ ಸರಿಯಿಲ್ಲ. ಮು ಮಾ 1 ಮತ್ತು 2 ಸಾಮಾನ್ಯವಾಗಿ ಎಲ್ಲಾಕಡೆಗೆ ಲಭ್ಯ ಇರುತ್ತದೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ಇದೆ ಕಲ್ಲು ಮತ್ತು ಬಡಿಗೆಯಿಂದ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಮು ಮಾ ಗೂ ಹಾಗೂ ಆರೋಪಿಗೂ ಯವುದೇ ರೀತಿಯ ಸಂಬಂದ ಇರುವುದಿಲ್ಲ ಎಂದರೆ ಸರಿಯಿಲ್ಲ. ಚಾ ಸಾ 4 ರಿಂದ 7 ರವರ ಹೇಳಿಕೆ ದಾಖಲಿಸಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಚಾ ಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**